## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಾಮೂಹಿಕ ವಿಮಾ ಯೋಜನೆಗೆ ಸಂಬಂಧಿಸಿದ ಪ್ರಸ್ತಾವನೆ, ನಾಮನಿರ್ದೇಶನ ಹಾಗೂ ಅಂತಿಮ ಕ್ಲೇಮುಗಳನ್ನು ಆನ್‌ಲೈನ್ (online) ಮೂಲಕ ಸ್ವೀಕರಿಸುವ ಮತ್ತು ವಿಲೇವಾರಿ ಮಾಡುವ ಬಗ್ಗೆ.

**ಓದಲಾಗಿದೆ:** ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ವಿನಿ/ಸಾವಿಯೋ/02/2022-23, ದಿನಾಂಕ:01/04/2022.

**//**//**

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಸಮಗ್ರ ಗಣಕೀಕರಣದ ಭಾಗವಾಗಿ ಇಲಾಖೆಯ ಕೆಲಸ ಕಾರ್ಯಗಳಲ್ಲಿ ಒಂದಾದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ, 1981, ಸಹ ಗಣಕೀಕರಣವಾಗುತ್ತಿದ್ದು, ಈ ಬಗ್ಗೆ ಯೋಜನೆಗೆ ಸಂಬಂಧಿಸಿದ ವಂತಿಗೆ, ಪ್ರಸ್ತಾವನೆ, ನಾಮನಿರ್ದೇಶನ ಹಾಗೂ ಅಂತಿಮ ಕ್ಲೇಮುಗಳ ವ್ಯವಹರಣೆ ಕುರಿತು ಈಗಾಗಲೇ ಕೆ.ಜಿ.ಐ.ಡಿ. ಪೋರ್ಟಲ್ https://kgidonline.karnataka.gov.in/ ರಲ್ಲಿ ಆನ್‌ಲೈನ್ (online) ಸೌಲಭ್ಯವಿರುತ್ತದೆ. ಆದ್ದರಿಂದ ಎಲ್ಲಾ ಇಲಾಖೆಗಳ ಡಿ.ಡಿ.ಓ. (ವೇತನ ಬಡವಾಡೆ ಅಧಿಕಾರಿ)ಗಳು ಕರ್ನಾಟಕ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ, 1981 ಗೆ ಸಂಬಂಧಿಸಿದ ಸ್ವೀಕೃತಿ, ನಾಮನಿರ್ದೇಶನ ಹಾಗೂ ಅಂತಿಮ ಕ್ಲೇಮು ಪ್ರಕರಣಗಳನ್ನು (Subscription, Nomination and Final Settlement Claims) ಆಫ್‌ಲೈನ್ (offline) ಮೂಲಕ ಸ್ವೀಕರಿಸುವುದನ್ನು ಕಡ್ಡಾಯವಾಗಿ ನಿಲ್ಲಿಸಿ, ಆನ್‌ಲೈನ್ (online) ಮೂಲಕ ನಿರ್ವಹಿಸಲು ಸೂಚನೆಗಳನ್ನು ನೀಡುವಂತೆ ಮೇಲೆ ಓದಲಾದ ಪತ್ರದಲ್ಲಿ ಆಡಳಿತಾಧಿಕಾರಿಗಳು, ಕರ್ನಾಟಕ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ ಹಾಗೂ ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು, ಇವರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 10 ಸಾವಿಯೋ 2022,**
**ಬೆಂಗಳೂರು, ದಿನಾಂಕ: 21/05/2022.**

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ, 1981 ರಡಿ ಎಲ್ಲಾ ಸೇವೆಗಳನ್ನು ಆನ್‌ಲೈನ್ (online) ಮೂಲಕವೇ ಕಡ್ಡಾಯವಾಗಿ ನಿರ್ವಹಿಸುವ ಕುರಿತು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿದೆ.

1. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ, 1981 ಗೆ ಸಂಬಂಧಿಸಿದ ಸ್ವೀಕೃತಿ, ನಾಮನಿರ್ದೇಶನ ಹಾಗೂ ಅಂತಿಮ ಕ್ಲೇಮು ಪ್ರಕರಣಗಳನ್ನು (Subscription, Nomination and Final Settlement Claims) ಕೆ.ಜಿ.ಐ.ಡಿ. ಪೋರ್ಟಲ್ https://kgidonline.karnataka.gov.in/ ರಲ್ಲಿ ಆನ್‌ಲೈನ್ (online) ಸೌಲಭ್ಯವಿರುವುದರಿಂದ ಸದರಿ ಪೋರ್ಟಲ್ ಮುಖಾಂತರವೇ ಕಡ್ಡಾಯವಾಗಿ ನಿರ್ವಹಿಸುವುದು.

2. ಈ ಆದೇಶವನ್ನು ಹೊರಡಿಸಿದ ದಿನಾಂಕದ ನಂತರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ, 1981 ಗೆ ಸಂಬಂಧಿಸಿದ ಸ್ವೀಕೃತಿ, ನಾಮನಿರ್ದೇಶನ ಹಾಗೂ ಅಂತಿಮ ಕ್ಲೇಮು ಪ್ರಕರಣಗಳನ್ನು (Subscription, Nomination and Final Settlement Claims) ಆಫ್‌ಲೈನ್ (offline) ಮೂಲಕ ಸ್ವೀಕರಿಸಿವುದನ್ನು ಕಡ್ಡಾಯವಾಗಿ ನಿಲ್ಲಿಸುವುದು.

3. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ, 1981 ರ ನಿಯಮಾವಳಿಯ ಪ್ರಕಾರ ಆನ್‌ಲೈನ್ (online) ಮೂಲಕ ಆಗುವ ಸ್ವೀಕೃತಿ, ನಾಮನಿರ್ದೇಶನ ಹಾಗೂ ಅಂತಿಮ ಕ್ಲೇಮು ಪ್ರಕರಣಗಳಿಗೆ (Subscription, Nomination and Final Settlement Claims), ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

4. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ, 1981 ರ ಅಂತಿಮ ಕ್ಲೇಮು ಪ್ರಕರಣಗಳಿಗೆ ಸಂಬಂಧಿಸಿದಂತೆ ಕೆ-2 ತಂತ್ರಾಂಶದಲ್ಲಿರುವ ಲೆಕ್ಕಚಾರ ಮಾಡುವ ಸೌಲಭ್ಯವನ್ನು (Calculate Button) ಕಡ್ಡಾಯವಾಗಿ ಕೆ-2 ವತಿಯಿಂದ ರದ್ದುಪಡಿಸುವುದು.

ಈ ಸಂಬಂಧ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ, 1981 ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ತರಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ನೇತ್ರಪ್ರಭಾ ಎಂ. ಧಾಯಪುಲೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು).

21/01/22

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸ ಸೌಧ, ಬೆಂಗಳೂರು.

ಪ್ರತಿ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ / ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಪಿ.ಒ.ಬಾಕ್ಸ್ ನಂ.5329/5369, ಪಾರ್ಕ್ ಹೌಸ್ ರೋಡ್, ಬೆಂಗಳೂರು - 560 001.
3. ಪ್ರಧಾನ ಮಹಾಲೇಖಪಾಲರು (ಜನರಲ್ & ಸೋಷಿಯಲ್ ಸೆಕ್ಟರ್ ಆಡಿಟ್), ಕರ್ನಾಟಕ, ನ್ಯೂ ಬಿಲ್ಡಿಂಗ್, ಆಡಿಟ್ ಭವನ, ಪಿ.ಬಿ.ನಂ.5398, ಬೆಂಗಳೂರು - 560 001.
4. ಪ್ರಧಾನ ಮಹಾಲೇಖಪಾಲರು (ಎಕನಾಮಿಕ್ & ರೆವೆನ್ಯೂ ಸೆಕ್ಟರ್ ಆಡಿಟ್), ಕರ್ನಾಟಕ, ನ್ಯೂ ಬಿಲ್ಡಿಂಗ್, ಆಡಿಟ್ ಭವನ, ಪಿ.ಬಿ.ನಂ.5398, ಬೆಂಗಳೂರು - 560 001.
5. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು.
6. * ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು - 560 001.
7. * ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಬೆಂಗಳೂರು - 560 001.
8. * ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಬೆಂಗಳೂರು.

9. ಎಲ್ಲಾ ಪ್ರಾದೇಶಿಕ ಆಯುಕ್ತರು.
10. * ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ದೇವರಾಜ ಅರಸ್ ರಸ್ತೆ, ಬೆಂಗಳೂರು - 560 001.
11. * ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ / ಪರಿಷತ್ತು, ವಿಧಾನ ಸಭೆ, ಬೆಂಗಳೂರು.
12. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆಪಿಸಿಎಲ್ ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು.
13. ಎಲ್ಲಾ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
14. ಯೋಜನಾ ನಿರ್ದೇಶಕರು, ಹೆಚ್.ಆರ್.ಎಂ.ಎಸ್.-2, 5ನೇ ಮಹಡಿ, ಕೆಪಿಸಿಎಲ್ ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು.
15. ಎಲ್ಲಾ ಇಲಾಖಾ ಮುಖ್ಯಸ್ಥರು.
16. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

(* ಮುಖಪತ್ರದೊಂದಿಗೆ)